ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕಂಥ ಕಾಮಗಾರಿ ಕೆಲಸದಲ್ಲಿ ಸರ್ಕಾರ ಕೈ ಹಾಕಲಿಕ್ಕೆ ಬರುವುದಿಲ್ಲ ಪ್ರಭಾವಿ ಸನ್ಮಾನ್ಯ ಸದಸ್ಯರೂ ಅವರೆ ಕೈಗುಲ್ಲಿಯೇ ಈ ಕೆಲಸವನ್ನು ಮಾಡಿಸಿಕೊಳ್ಳಲಿಕ್ಕೆ ಶಕ್ತಿ ಇದೆ ಎನ್ನುವ ಪರಾತನ್ನು ನಾನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿಗೆ ಹಣ ಕೊಡತಕ್ಕದ್ದು ಸರ್ಕಾರದ ಕರ್ತವ್ಯ...

ಅಧ್ಯಕ್ಷರು.—ನಿಯಮ ೩೫ಳಿರಲ್ಲಿ ಮತ್ತೆ ವಿಚಾರ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇಲ್ಲ. ದಯವಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೆ ಕುಶಾಲ.—ಅಧ್ಯಕ್ಷರೆ, ನನ್ನ ಹೆಸರಿನಲ್ಲಿ ನಿಯಮ ೩೫ಳಿ ಪ್ರಕಾರ ಎರಡು ವಿಚಾರ ಇದೆ ಅವೆರಡನ್ನೂ ಕೂಡ ನಾನು ಓದಿಬಿಡುತ್ತೇನೆ.

ಅಧ್ಯಕ್ಷರು.—ತಾವು ಮೊದಲು ಓದಿ ಹೇಳಿ.

೧೧) ಸರ್ಕಾರಿ ನೌಕರರ ವರ್ಗಾವಣೆಯನ್ನು ಜೂನ್ ತಿಂಗಳಲ್ಲಿಯೇ ಮಾಡಲು ಒತ್ತಾಯ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಮೊದಲನೆಯದು ರಾಜ್ಯಾದ್ಯಂತ ಅವಧಿಪೂರ್ಣ ಹಾಗೂ ಬೇಡಿಕೆಯ ವರ್ಗಾವಣೆಯಂತೆ ವಿವಿಧ ಸರಕಾರಿ ಇಲಾಖಾ ನೌಕರರ ಸಿಬ್ಬಂದಿ ಮತ್ತು ಅಧಿಕಾರಿ ವರ್ಗದವರನ್ನು ಸರಕಾರಿ ವರ್ಗಾವಣೆ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆಯೇ ಅಥವಾ ಇಲ್ಲವೇ ವರ್ಗಾವಣೆ ಮಾಡುವ ಯೋಜನೆಯನ್ನು ಇಟ್ಟುಕೊಂಡಲ್ಲಿ ಜೂನ್ ತಿಂಗಳು ಪ್ರಥಮ ವಾರವಾದರೂ ವರ್ಗಾವಣೆ ಆದೇಶ ನೀಡದೆ ವಿಳಂಬವಾಗಲು ಕಾರಣಗಳೇನು? ಸರಕಾರಿ ನೌಕರ ಸಿಬ್ಬಂದಿಗಳನ್ನು ನಿರ್ದಿಷ್ಟ ಅವಧಿಯ ನಂತರ ವರ್ಗಾವಣೆ ಮಾಡಲು ಸೇವಾ ನಿಯಮಾವಳಿ ಕಾನೂನಿನ ಅಡಿ ಬರುವುದಿಲ್ಲವೆ ಮತ್ತು ತಡವಾಗಿ ವರ್ಗಾವಣೆ ಆಗುವುದರಿಂದ ಅವರ ಕುಟುಂಬಕ್ಕೆ ಹಾಗೂ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲಾ ಕಾಲೇಜುಗಳಿಗೆ ತೊಂದರೆಯಾಗುವುದರಿಂದ ತಡವಾದ ವರ್ಗಾವಣೆಯನ್ನು ಕೈ ಬಿಡಬಾರದೇಕೆ ಎಂದು ಸರಕಾರದ ಗಮನ ಸೆಳೆಯಬಯಸುತ್ತೇನೆ.

೧೨) ಸುಳ್ಯ ತಾಲ್ಲೂಕಿಗೆ ವಿದ್ಯುತ್ ಉಪಕೇಂದ್ರವನ್ನು ಈ ವರ್ಷವೇ ಮಂಜೂರು ಮಾಡುವುದು.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಇನ್ನು ಎರಡನೆಯದು ಸುಳ್ಯ ತಾಲ್ಲೂಕಿನ ಸೂಳ್ಯದಲ್ಲಿ ೩೩.೧೧ ಕಿಲೋವಾಟ್ ವಿದ್ಯುತ್ ಸಬ್‌ಸ್ಟೇಷನ್ ಇರುವುದು ಇಲ್ಲಿ ಈಗ ಕೆಲವು ವರ್ಷದಿಂದ ೩೩.೧೧ ಕಿಲೋವಾಟ್ ಬದಲು ೧೫ ಕಿ ವಾಟ್ ವಿದ್ಯುತ್ ಟ್ರಾನ್ಸ್‌ಫಾರ್ಮರನ್ನು ಮಾತ್ರ ಅಳವಡಿಸಲಾಗಿದೆ. ಇದು ಓವರ್ ಲೋಡಿನಿಂದ ಕೆಲಸ ಮಾಡಲೇಕಾಗಿದೆ. ಇಲ್ಲಿಗೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಒದಗಿಸಲು ಕಳೆದ ಮೂರು ವರ್ಷಗಳಿಂದ ೨೦ ಅಂಶಗಳ ಕಾರ್ಯಕ್ರಮದ ಸಭೆ ಹಾಗೂ ತಾಲ್ಲೂಕು ಪಂಚಾಯತಿ ಸಮಿತಿ ಸಭೆಯ ನಿರ್ಣಯದಂತೆ ಇಲಾಖೆಗೆ ಹಾಗೂ ಸರಕಾರಕ್ಕೆ ಹಲವು ಬಾರಿ ಬರೆದುಕೊಳ್ಳಲಾಗಿತ್ತು. ಆದರೆ ಇಲಾಖೆಯಾಗಲಿ ಸರಕಾರವಾಗಲಿ ಈ ಹೆಚ್ಚುವರಿ ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಅಸಾಧ್ಯವಾಗಿದೆ. ಇದರಿಂದಾಗಿ ತಾಲ್ಲೂಕಿನಲ್ಲಿ ಇತರ ಕಡೆಗಳಲ್ಲಿ ಅಳವಡಿಸಿದ ೧೧.೪೪೦ ಕಿ. ವಾಟ್ ಟ್ರಾನ್ಸ್‌ಫಾರ್ಮರುಗಳು, ಓವರ್‌ಲೋಡಿನಿಂದಾಗಿ ಹಲವ ಬಾರಿ ಸುಟ್ಟು ಹೋಗುತ್ತಿವೆ. ಇದರಿಂದಾಗಿ ತಾಲ್ಲೂಕಿನಾದ್ಯಂತ ಇರುವ ಟ್ರಾನ್ಸ್‌ಫಾರ್ಮರುಗಳು ಸುಟ್ಟು ಹೋಗುವುದು ಮಾತ್ರವಲ್ಲದೆ ತಾಲ್ಲೂಕಿನಲ್ಲಿ ದಿನದಲ್ಲಿ ಹಲವು ಬಾರಿ ವಿದ್ಯುತ್ ನಿಲುಗಡೆಯಾಗುತ್ತಿದೆ. ಮತ್ತು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸದೆ ಕಡಿಮೆ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರಿಂದ ಹಳ್ಳಿಯಲ್ಲಿ ರೈತರಿಗೆ ವಿದ್ಯುತ್ ಪಂಪುಗಳನ್ನು ಚಾಲು ಮಾಡಲು ಆಗ್ತಾಗಿ ಬೇಕಾದ ವೋಲ್ಟೇಜು ಕೂಡ ದೊರೆಯದೆ ತೊಂದರೆಯಾಗುತ್ತಿದೆ. ಆದೇ ರೀತಿ ಸೂಳ್ಯದಲ್ಲಿ ವಿದ್ಯುತ್ ಉಪಕೇಂದ್ರ ತೆರೆಯದೆ ಸುಳ್ಯಕ್ಕೆ ಬೇಕಾದ ಹೆಚ್ಚಿನ ವಿದ್ಯುತ್ ಸರಬರಾಜು ಹೊಂದಿದ ಪುತ್ತೂರು ತಾಲ್ಲೂಕಿನಲ್ಲಿರುವ ೧೧೦ ಕಿ. ವಾಟ್ ಸಬ್ ಸ್ಟೇಷನ್‌ನ ಟ್ರಾನ್ಸ್‌ಫಾರ್ಮರು ಕೂಡಾ ಓವರ್‌ಲೋಡು ಆಗುತ್ತಿದೆ. ಇದರ ಬದಲು ಪುತ್ತೂರಿನಲ್ಲಿ

೧೧೦.೩೩ ಕೆ ವಾಟ್ ಬದಲು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಟ್ರಾನ್ಸ್‌ಫಾರ್ಮರ್ ಒದಗಿಸುವ ವ್ಯವಸ್ಥೆ ಆಗಬೇಕಾಗಿದೆ.

ಸುಳ್ಯ ತಾಲ್ಲೂಕಿನಲ್ಲಿ ಸುಳ್ಯ ವಿದ್ಯುತ್ ಸಬ್ ಸ್ಟೇಷನ್ನಿನ ಬದಲು ೩ ಲಕ್ಷಕ್ಕೂ ಮಿಕ್ಕಿ ವಿದ್ಯುತ್ ಇನ್ಸ್‌ಲೇಶನ್ ಹೊಂದಿದ್ದರೂ ಕೆಲವು ವರ್ಷ ಸುಳ್ಯಕ್ಕೆ ವಿದ್ಯುತ್ ಉಪಕೇಂದ್ರ ಮಂಜೂರಾತಿಯ ಕುರಿತು, ಇಲಾಖೆ ವರದಿ ಸಲ್ಲಿಸಿದ್ದರೂ ಈ ತನಕ ಸದರಿ ವಿದ್ಯುತ್ ಉಪಕೇಂದ್ರ ತೆರೆಯಲು ಸರಕಾರ ಮಂಜೂರಾತಿ ನೀಡಿರುವುದಿಲ್ಲ. ಆದುದರಿಂದ ಈ ಮೇಲಿನ ಕೆಲವು ಅಂಶಗಳ ಕುರಿತು ಸರಕಾರ ಸೂಕ್ತ ಕ್ರಮಕ್ಕೆ ಗೊಳ್ಳುವುದರ ಜೊತೆಗೆ ಸುಳ್ಯ ತಾಲ್ಲೂಕಿಗೆ ವಿದ್ಯುತ ಉಪಕೇಂದ್ರವನ್ನು ಕೂಡ ಈ ವರ್ಷವೇ ಮಂಜೂರಾತಿ ನೀಡಬೇಕಾಗಿ ಸಚಿವರ ಮುಖೇನ ಒತ್ತಾಯಿಸಬಯಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಸುಳ್ಯದಲ್ಲಿ ಒಂದು ೫೩/೧೧ ಕ.ವಿ ಸಬ್ ಸ್ಟೇಷನ್ ಇದೆ ಒಂದು ೫ ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಕಾರ್ಯ ನಿರತವಾಗಿದೆ. ಇದು ಶೇಕಡ ೮೮ ರಷ್ಟು ಲೋಡ್ ಆಗಿದೆ. ಸುಳ್ಯಕ್ಕೆ ಪುತ್ತೂರು ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಪುತ್ತೂರಿನಲ್ಲಿ ೧೧೦/೫೩ ಕವಿಎ ಯ ತಲಾ ೧೦ ಎಂವಿಎ ಸಾಮರ್ಥ್ಯದ ಎರಡು ಟ್ರಾನ್ಸ್‌ಫಾರ್ಮರ್‌ಗಳು ಕಾರ್ಯ ನಿರತವಾಗಿವೆ. ಪುತ್ತೂರು ಸ್ಟೇಷನ್ನಿನ ಸಾಮರ್ಥ್ಯ ಹೆಚ್ಚಿಸುವ ಅವಶ್ಯಕತೆ ಕಂಡುಬಂದಿದೆ. ಇದಕ್ಕೆ ೩ ಪ್ರಸ್ತಾಪಗಳಿದ್ದು ಅವುಗಳನ್ನು ತಾಂತ್ರಿಕ ಸಮಿತಿಯ ಪರಿಶೀಲನೆಗೆ ಸಧ್ಯದಲ್ಲಿಯೇ ಒಪ್ಪಿಸಲಾಗುತ್ತಿದೆ. ಈ ಸಮಿತಿಯ ನಿರ್ಧಾರದಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

ಪುತ್ತೂರು ಸ್ಟೇಷನ್ ಸಾಮರ್ಥ್ಯ ಹೆಚ್ಚಿಸುವ ಕೆಲಸ ಮುಗಿದ ನಂತರ, ಸುಳ್ಯದಲ್ಲಿ ವೋಲ್ಟೇಜ್ ಸ್ಥಿತಿ ಸುಧಾರಿಸುತ್ತದೆ. ಸುಳ್ಯದಲ್ಲಿನ ಸ್ಟೇಷನ್ನಿನ ಸಾಮರ್ಥ್ಯ ಹೆಚ್ಚಿಸುವ ಬಗ್ಗೆ ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಪ್ರಶ್ನೆ ಈ ಬಗ್ಗೆ ಯೋಚಿಸಿಲ್ಲ.

ಸುಳ್ಯದಲ್ಲಿ ೧ ಉಪ ವಿಭಾಗೀಯ ಕಛೇರಿ ತೆರೆಯುವ ಪ್ರಸ್ತಾಪವನ್ನು ೧೯೬೬ರ ಕೊನೆಯಲ್ಲಿ ಪರಿಶೀಲಿಸಿ ಆಗ ಸುಳ್ಯ ತಾಲ್ಲೂಕಿನಲ್ಲಿ ಕೇವಲ ೪೦೦೦ ಇನ್‌ಸ್ಟಲೇಷನ್‌ಗಳು ಮಾತ್ರ ಇದ್ದು, ವರ್ಕ್ ಲೋಡ್ ಇಲ್ಲದೇ ಇದ್ದುದರಿಂದಲೂ ಸುಳ್ಯವು ಪುತ್ತೂರು ಉಪ ವಿಭಾಗಕ್ಕೆ ಸಮೀಪವಿದ್ದುದರಿಂದಲೂ ಸುಳ್ಯದಲ್ಲಿ ಒಂದು ಉಪ ವಿಭಾಗ ಕಛೇರಿಯನ್ನು ತೆರೆಯುವ ಪ್ರಸ್ತಾಪವನ್ನು ಹಾಗೆಯೇ ಮುಂದೂಡಲಾಯಿತು, ಈಗ ಮಂಡಲೀಯ ವಿಭಾಗ, ಉಪ ವಿಭಾಗ, ಶಾಖೆಗಳ ಪುನರ್ರಚನೆಗೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಮಂಡಲೀಯ ಆರ್ಥಿಕ ಸಿ ತಿಯನ್ನು ಗಮನದಲ್ಲಿ ಇಟ್ಟುಕೊಂಡು ಅಗತ್ಯ ಬಂದ ಕಡೆಗಳಲ್ಲಿ ಕನಿಷ್ಠ ಅಗತ್ಯ ಪೂರೈಸಲು ಪ್ರಯತ್ನಿಸಲಾಗುತ್ತದೆ.

೧೩. ಮಂಡಲ ಪಂಚಾಯಿತಿಯ ನೌಕರರಿಗೆ ನೇಮಕಾತಿ ನಿಯಮಾವಳಿಗಳನ್ನು ಕೂಡಲೆ ಮಂಜೂರು ಮಾಡುವುದು

ಶ್ರೀ ಕೆ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದು ಒಂದು ವರ್ಷವಾದರೂ ನೌಕರರ ಸ್ಥಿತಿ ಇನ್ನೂ ಚಿಂತಾಜನಕವಾಗಿಯೇ ಉಳಿದಿರುತ್ತದೆ. ಮಂಡಲ ಪಂಚಾಯಿತ್ ನೌಕರರಿಗೆ ಸಂಬಳ ಜಾಸ್ತಿ ಮಾಡಬಾರದು ಎಂದು ಸರ್ಕಾರವು ಆದೇಶ ಹೊರಡಿಸಿದ್ದು ಅತೀ ಕಡಿಮೆ ಸಂಬಳದಲ್ಲಿ ಇರುವ ಹರಿಜನ ಗಿರಿಜನ ಹಾಗೂ ಇತರ ನೌಕರರ ಸ್ಥಿತಿ ಚಿಂತಾಜನಕವಾಗಿರುತ್ತದೆ. ಎಸ್ ಎಸ್.ಎಲ್.ಸಿ. ಆದ ನೌಕರರಿಗೆ ಲೆಕ್ಕಿಗ, ಗುಮಾಸ್ತ, ಹುದ್ದೆಗೆ ಸಂದರ್ಶನವಾಗಿ ೧೦ ತಿಂಗಳಾದರೂ ನೇಮಕಾತಿ ಆಗಿಲ್ಲ. ನೌಕರರ ನೇಮಕಾತಿ ನಿಯಮಾವಳಿಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ ಮಾನ್ಯ ಮಂತ್ರಿಗಳು ಭರವಸೆಯನ್ನು ನೀಡುತ್ತಿದ್ದಾರೆಯೇ ವಿನಹಾ ಏನೂ ಆದಂತೆ ಕಂಡುಬರುವುದಿಲ್ಲ. ರಾಜ್ಯದ ೧೦ ಸಾವಿರ ನೌಕರರ ಭವಿಷ್ಯತ್ತಿನ ಬಗ್ಗೆ ನೌಕರರ ನೇಮಕಾತಿ ನಿಯಮಾವಳಿಗಳನ್ನು ಕೂಡಲೇ ಮಂಜೂರು ಮಾಡಿ ನೌಕರರಿಗೆ ಸಮಾನ್ಯ ವೇತನ ಭದ್ರತೆ ಮತ್ತು ಸೇವಾ ಭದ್ರತೆ ನೀಡುವಂತೆ ಸರ್ಕಾರವನ್ನು ಮಂಡಲ ಪಂಚಾಯತ್ ನೌಕರರ ಪರವಾಗಿ ಒತ್ತಾಯಿಸುತ್ತೇನೆ